ಸಾಕ್ಷಿದಾರರನ್ನು ದಿನಾಂಕಃ 31-10-2017. ರಂದು ಪುನಃ ಕರೆಯಿಸಿ ಪ್ರಮಾಣ ವಚನ ಕೊಡಿಸಲಾಯಿತು.

**ಮುಂದುವರಿದ ಪಾಟೀ ಸವಾಲು ಶ್ರೀ ಎಂ ಎಸ್ ಬಿ ವಕೀಲರಿಂದಃ-**

ಸಬ್‌ಡಿವಿಜನ ಪ್ರಕಾರ ಆಸ್ತಿ ಖರೀದಿ ಮಾಡಿ ಕಬ್ಜೆಯಲ್ಲಿರುವ ಯೂವದೇ ವ್ಯಕ್ತಿಗೆ ನಾನು ನೋಟೀಸು ಕೊಟ್ಟಿರುವುದಿಲ್ಲ. ಬೇರೆಯವರು ದಾವಾ ಆಸ್ತಿ ಕಬ್ಜೆಯಲ್ಲಿದ್ದು ಕಾರಣ ಅಳತೆ ಕೆಲಸ ಪೂರೈಸಲು ಆಗುವದಿಲ್ಲ ಎಂದು ವರದಿಯನ್ನು ಕೋರ್ಟಗೆ ಸಲ್ಲಿಸಿರುವುದಿಲ್ಲ. ನನಗೆ ನ್ಯಾಯೂಲಯದ ಡಿಕ್ರೀ ಆದ ದಿನಾಂಕದ ಬಗ್ಗೆ ಮಾಹಿತಿ ಇದ್ದು ದಾವಾ ಆಸ್ತಿ ಸಬ ಡಿವಿಜನ ಆದ ದಿನಾಂಕದ ಬಗ್ಗೆ ಗೊತ್ತಿರುವುದಿಲ್ಲ. ದಾಖಲೆಗಳ ಪ್ರಕಾರ ಈಗಾಗಲೇ ಸಿಟಸರ್ವೆ ನಂಃ 1931 ರಲ್ಲಿ ಒಂದು ಸಬ್‌ಡಿವಿಜನ್ ಆಗಿದ್ದು ಸಿಟಿಸರ್ವೆ ನಂಃ 2194 ರಲ್ಲಿ 3 ಸಬ್‌ಡಿವಿಜನ್‌ಗಳು ಆಗಿರುತ್ತವೆ. ಮೇಲೆ ಹೇಳಿದ ಕಾರಣಗಳಿಗಾಗಿ ಸಂಪೂರ್ಣ ಆಸ್ತಿಗಳ ಅಳತೆ ಮಾಡಲು ಆಗುವದಿಲ್ಲ ಎನ್ನುವದು ನಿಜ. ವಿಭಾಗ ಆದ ನಂತರ ಎಲ್ಲಾ ಆಸ್ತಿಗಳನ್ನು ಒಗ್ಗೂಡಿಸಿ ಹಿರಿಯ ಅಧಿಕಾರಿಗಳ ಆದೇಶವಿಲ್ಲದೇ ಅಳತೆ ಕಾರ್ಯ ಪೂರೈಸಲು ಬರುವದಿಲ್ಲ ಎಂದರೆ ಸಾಕ್ಷಿ ಹೇಳುತ್ತಾರೆ ಈ ನ್ಯಾಯೂಲಯದ ಆದೇಶದ ಪ್ರಕಾರ ನಾನು ಅಳತೆ ಕಾರ್ಯ ಕೈಕೊಂಡಿರುತ್ತೇನೆ. ನ್ಯಾಯೂಲಯದ ಆದೇಶದ ಬಗ್ಗೆ ಹಿರಿಯ ಅಧಿಕಾರಿಗಳಲ್ಲಿ ಚರ್ಚೆ ಮಾಡಿದ ನಂತರ ಅಳತೆ ಕಾರ್ಯ ಪೂರೈಸಿರುತ್ತೇನೆ. ಆದರೆ ಹಿರಿಯ ಅಧಿಕಾರಿಗಳಿಂದ ಬರವಣಿಗೆಯಲ್ಲಿ ಅಳತೆ ಕಾರ್ಯಕ್ಕಾಗಿ ಆದೇಶ ಪಡೆದುಕೊಂಡಿಲ್ಲ. ನ್ಯಾಯೂಲಯದ ನೀಡಿರುವ ವಾರಂಟನಲ್ಲಿ ಮತ್ತು ನ್ಯಾಯೂಲಯದ ಡಿಕ್ರೀಯಲ್ಲಿ ಕೇವಲ ಸಿಟಿಸರ್ವೆ ನಂಬರಗಳನ್ನು ಮಾತ್ರ ಕಾಣಿಸಿದ್ದು ಎಷ್ಟು ಕ್ಷೇತ್ರದ ಅಳತೆಯನ್ನು ಮಾಡಬೇಕೆಂದು ಆದೇಶ ಇರುವುದಿಲ್ಲ ಎನ್ನುವದು ನಿಜ. ನ್ಯಾಯೂಲಯದ ಡಿಕ್ರೀಯಲ್ಲಿ ಮತ್ತು ವಾರಂಟನಲ್ಲಿ ಸಿಟಿಸರ್ವೆ ನಂಃ 1931 ಮತ್ತು 2194 ರಲ್ಲಿ ಪಾಲು ವಾಟ್ನೀ ಮಾಡಿಕೊಡಬೇಕೆಂದು ಆದೇಶ ಇದ್ದು ಆಸ್ತಿಗಳ ಕ್ಷೇತ್ರ ನಮೂದಿಸಿಲ್ಲ ಎನ್ನುವದು ನಿಜ. ಸಾಮಾನ್ಯವಾಗಿ ಜನರು ತಮ್ಮ ಆಸ್ತಿಯನ್ನು ಅಳತೆ ಮಾಡಲು ಕೋರಿದಲ್ಲಿ ಸದರಿ ಅರ್ಜಿಯಲ್ಲಿ ಆಸ್ತಿ ನಂಬರ, ಚಕಬಂದಿ ಮತ್ತು ಅದರ ಕ್ಷೇತ್ರವನ್ನು ನಮೂದಿಸಬೇಕಾಗುತ್ತದೆನ್ನುವದು ನಿಜ. ಒಂದು ವೇಳೆ ಆಸ್ತಿಯ ಕ್ಷೇತ್ರವನ್ನು ಅರ್ಜಿಯಲ್ಲಿ

ನಿಖರವಾಗಿ ಕಾಣಿಸದಿದ್ದರೆ ಎಷ್ಟು ಕ್ಷೇತ್ರದ ಅಳತೆ ಕಾರ್ಯವನ್ನು ಕೈಕೊಳ್ಳಬೇಕೆಂದು ತಿಳಿಯುವದಿಲ್ಲ ಎನ್ನುವದು ನಿಜ. ಈ ಪ್ರಕರಣದಲ್ಲಿ ಆಸ್ತಿಗಳ ಕ್ಷೇತ್ರವನ್ನು ಡಿಕ್ರೀಯಲ್ಲಿ ಮತ್ತು ವಾರಂಟನಲ್ಲಿ ನಮೂದು ಮಾಡಿರದ ಕಾರಣ ಅದನ್ನು ನಮೂದು ಮಾಡುವಂತೆ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿರುವುದಿಲ್ಲ. ಕೋರ್ಟನ ವಾರಂಟನಲ್ಲಿ ಮತ್ತು ಡಿಕ್ರೀಯಲ್ಲಿ ಇಂತಿಷ್ಟೇ ಕ್ಷೇತ್ರದ ಆಸ್ತಿಯನ್ನು ಅಳತೆ ಮಾಡಬೇಕೆಂದು ಆದೇಶ ಇದ್ದಿಲ್ಲ ಎನ್ನುವದು ನಿಜ. ನಾನು ನನ್ನ ಸ್ವಂತ ನಿರ್ದಾರದ ಮೇಲೆ ಅಳತೆ ಕಾರ್ಯವನ್ನು ಪೂರೈಸಿರುತ್ತೇನೆ. ಮೇಲೆ ಹೇಳಿದಂತೆ ನ್ಯಾಯಾಲಯದ ಆದೇಶದ ಆಸ್ತಿಗಳ ಕ್ಷೇತ್ರ ನಮೂದು ಇರದೇ ಇದ್ದರೂ ಕೂಡಾ ನನ್ನ ಸ್ವಂತ ನಿರ್ದಾರದ ಮೇಲೆ ಅಳತೆ ಮಾಡಿ ವರದಿ ಸಲ್ಲಿಸಿದ್ದೇನೆನ್ನುವದು ನಿಜ. ಕೋರ್ಟಿನ ಆದೇಶದಲ್ಲಿ ಆಸ್ತಿಗಳ ಕ್ಷೇತ್ರ ನಮೂದು ಇರದೇ ಇದ್ದರೂ ಕೂಡಾ ಸ್ವಂತ ನಿರ್ದಾರದ ಮೇಲೆ ಅಳತೆ ಕಾರ್ಯ ಮಾಡಲು ಬರುವದಿಲ್ಲ ಎಂದರೆ ಸಾಕ್ಷಿ ಹೇಳುತ್ತಾರೆ ನ್ಯಾಯಾಲಯದ ಆದೇಶದ ಪ್ರಕಾರ ಪ್ರತಿಯೊಬ್ಬರಿಗೆ 1/6 ಭಾಗವನ್ನು ಮಾಡಿಕೊಡಬೇಕೆಂದು ಇದ್ದು ಅದರ ಆದಾರದ ಮೇಲೆ ಅಳತೆ ಕಾರ್ಯ ಮಾಡಿರುತ್ತೇನೆ. ಎಷ್ಟು ಕ್ಷೇತ್ರದಲ್ಲಿ 1/6 ಭಾಗವನ್ನು ಮಾಡಬೇಕೆಂದು ಕೋರ್ಟ ಆದೇಶದಲ್ಲಿ ಇರಲೇಲ್ಲ ಎನ್ನುವದು ನಿಜ. ಅರ್ಜಿದಾರರ ಕೋರಿಕೆ ಮೇರೆಗೆ ನಾನು ಅಳತೆ ಕಾರ್ಯವನ್ನು ಪೂರೈಸಿರುತ್ತೇನೆನ್ನುವದು ಸರಿಯಲ್ಲ. ನ್ಯಾಯಾಲಯದಿಂದ ಇಂತಿಷ್ಟೆ ಕ್ಷೇತ್ರದಲ್ಲಿ ವಿಭಾಗ ಮಾಡಿಕೊಡಬೇಕೆಂದು ಆದೇಶ ಇರದಿದ್ದರೂ ಕೂಡಾ ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ವರದಿ ಸಲ್ಲಿಸಿದ್ದೇನೆನ್ನುವದು ಸರಿಯಲ್ಲ. ಬೇರೆಯವರು ಆಸ್ತಿಗಳ ಸಬ್ ಡಿವಿಜನ್‌ನ ಕಬ್ಜೆಯಲ್ಲಿದ್ದಾರೆಂದು ನ್ಯಾಯಾಲಯಕ್ಕೆ ವರದಿಯನ್ನು ಕೊಟ್ಟಿರುವದಿಲ್ಲ. ಮೇಲೆ ಹೇಳಿದಂತೆ ಅಳತೆ ಪೂರೈಸಲು ಅಡೆತಡೆಗಳು ಇದ್ದಾಗ ಕಾನೂನಿನ ಪ್ರಕಾರ ಅಳತೆ ಕಾರ್ಯ ಪೂರೈಸಲು ಬರುವದಿಲ್ಲ ಎನ್ನುವದು ಸರಿಯಲ್ಲ ಎಂದರೆ ಸಾಕ್ಷಿ ಹೇಳುತ್ತಾರೆ ನ್ಯಾಯಾಲಯದ ಆದೇಶದ ಪ್ರಕಾರ ಅಳತೆ ಕಾರ್ಯ ಪೂರೈಸಿರುತ್ತೇನೆ. ನಾನು ಕರ್ನಾಟಕ ಭೂಕಂದಾಯ ಕಾಯ್ದೆ ಮತ್ತು ಸರ್ವೆ ಮ್ಯಾನುವೆಲ್‌ಗಳನ್ನು ಓದಿರುತ್ತೇನೆ. ಅಳತೆ ವಿಷಯದಲ್ಲಿ ಗೊಂದಲ ಇದ್ದಾಗ ಸರ್ವೆ ಕಾರ್ಯ ಪೂರೈಸಲು ಬರುವದಿಲ್ಲ ಎಂದು ಸರ್ವೆ ಮ್ಯಾನುವೆಲ್‌ನಲ್ಲಿ ತಿಳಿಸಲಾಗಿದೆ ಎನ್ನುವದು ನಿಜ. ನನಗೆ ಯಾವದೇ ಅದಿಕಾರ ಇರದಿದ್ದರೂ ಮತ್ತು ಕೋರ್ಟ ಆದೇಶದಲ್ಲಿ ಸ್ಪಷ್ಟತೆ ಇರದಿದ್ದರೂ ಅದಿಕಾರ ವ್ಯಾಪ್ತಿ ಮೀರಿ ಸರ್ವೆ ಕಾರ್ಯ

ಪೂರೈಸಿ ಸುಳ್ಳು ವರದಿ ಸಲ್ಲಿಸಿದ್ದೇನೆನ್ನುವದು ಸರಿಯಲ್ಲ. ಭಾಗ ಮಾಡಿದ ಯಾವ ಭಾಗವನ್ನು ಯಾರಿಗೆ ಕೊಡಬೇಕೆಂದು ಆದೇಶ ಇರದಿದ್ದರೂ ಕೂಡಾ ನಾನೇ ಸ್ವತಃ ಇಂತಹ ಭಾಗವನ್ನು ವಾದಿಯರಿಗೆ ಕೊಡಬೇಕೆಂದು ವರದಿಯಲ್ಲಿ ಕಾಣಿಸಿರುತ್ತೇನೆನ್ನುವದು ನಿಜ. ಈ ಎಲ್ಲಾ ಕೆಲಸಗಳನ್ನು ನನ್ನ ಕಾರ್ಯ ವ್ಯಾಪ್ತಿ ಮೀರಿ ಮಾಡಿದ್ದೇನೆನ್ನುವದು ಸುಳ್ಳು. ಕಚೇರಿಯಲ್ಲಿ ಕುಳಿತು ಅರ್ಜಿದಾರರಿಗೆ ಅನುಕೂಲವಾಗುವಂತೆ ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆನ್ನುವದು ಸುಳ್ಳು.

ಮರು ವಿಚಾರಣೆ – ಇಲ್ಲಾ –

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ)
ಓ ಹೆ ಕೆ ಸರಿ ಅದೆ, ನನ್ನ ಸಮಕ್ಷಮ,

1ನೇ ಹೆಚ್ಚುವರಿ ಹಿ. ದಿ. ನ್ಯಾಯಾಧೀಶರು, ಹುಬ್ಬಳ್ಳಿ.